ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ವಿಶ್ವೇಶ್ವರಯ್ಯ ಕೇಂದ್ರ, ಚಿಕ್ಕ ಗೋಪುರ, ಮೂರನೇ ಮಹಡಿ,
ಡಾ॥ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಕರ್ನಾಟಕ
E-mail ID:icps.kar@gmail.com Phone No: 080-22867383

ಸಂಖ್ಯೆ:ಕೆಎಸ್‌ಐಸಿಪಿಎಸ್/ಐಇಸಿ/ಐಇಸಿ/ಟಿಸಿಎಚ್/03/2020-21 ದಿನಾಂಕ:25-10-2021

**ಸುತ್ತೋಲೆ**

ವಿಷಯ:- ಮಕ್ಕಳ ರಕ್ಷಣಾ ಸೇವೆಯಾದ ಮಕ್ಕಳ ಸಹಾಯವಾಣಿ-1098 ಹಾಗೂ ಉಚಿತ ಟೆಲಿ ಆಪ್ತಸಮಾಲೋಚನೆ ಸಂಖ್ಯೆ:14499 ಕುರಿತು ಕಾರುಗಳ ಮೇಲೆ ಸ್ಟಿಕ್ಕರ್ ಅಳವಡಿಸುವ ಬಗ್ಗೆ.

* * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, **ಮಕ್ಕಳ ಸಹಾಯವಾಣಿ-1098** ಇದು ರಾಷ್ಟ್ರ ವ್ಯಾಪ್ತಿಯಲ್ಲಿ ಚಾಲ್ತಿಯಲ್ಲಿರುವ ಮಕ್ಕಳ ಸಹಾಯವಾಣಿ. ಸಂಕಷ್ಟದಲ್ಲಿ ಸಿಲುಕಿರುವ/ಪಾಲನೆ ಮತ್ತಯ ರಕ್ಷಣೆ ಅವಶ್ಯಕತೆ ಇರುವ ಮಕ್ಕಳಿಗೆ ತುರ್ತು ಸೇವೆಯನ್ನು ಒದಗಿಸಲು ಈ ಸಂಖ್ಯೆಗೆ ಕರೆ ಮಾಡುವ ಮೂಲಕ ನೆರವು ಪಡೆಯಬಹುದಾಗಿದೆ. ಈ ಸಂಖ್ಯೆಯು ಉಚಿತ ದೂರವಾಣಿಯಾಗಿದ್ದು ಮಕ್ಕಳಾಗಲಿ ಅಥವಾ ಸಾರ್ವಜನಿಕರಾಗಲಿ ಕರೆ ಮಾಡುವ ಮೂಲಕ ತುರ್ತು ನೆರವು ಅಗತ್ಯವಿರುವ ಮಕ್ಕಳಿಗೆ ರಕ್ಷಣೆಯನ್ನು ಒದಗಿಸಬಹುದಾಗಿದೆ.

**ಉಚಿತ ಟೆಲಿ ಆಪ್ತಸಮಾಲೋಚನೆ ಸಂಖ್ಯೆ 14499:** ಆಪ್ತ ಸಮಾಲೋಚನೆ ಬಯಸುವ ಕರ್ನಾಟಕದಲ್ಲಿನ ಎಲ್ಲಾ ಮಕ್ಕಳು ಹಾಗೂ ಮಕ್ಕಳಿಗಾಗಿ ಮಕ್ಕಳ ಪೋಷಕರು ಸಹ 14499 ಸಂಖ್ಯೆಗೆ ಕರೆ ಮಾಡುವ ಮೂಲಕ ಮಕ್ಕಳಿಗೆ ಉಚಿತವಾಗಿ ಆಪ್ತ ಸಮಾಲೋಚನೆ ಸೌಲಭ್ಯ ಪಡೆಯಬಹುದಾಗಿದೆ.

ಈ ಎರಡು ಟೋಲ್ ಫ್ರೀ ಸಂಖ್ಯೆಗಳ ಕುರಿತು ಸಾರ್ವಜನಿಕರಿಗೆ ಹಾಗೂ ಮಕ್ಕಳಿಗೆ ಹೆಚ್ಚಿನ ಪ್ರಚಾರ ನೀಡಬೇಕಾಗಿರುವುದರಿಂದ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಡಿಯಲ್ಲಿ ನಿಯೋಜಿಸಿಕೊಳ್ಳಲಾಗುವ ಎಲ್ಲಾ ಕ್ಷೇತ್ರ ಮಟ್ಟದ ಕಾರುಗಳು ಹಾಗೂ ಮಕ್ಕಳ ಪಾಲನಾ ಸಂಸ್ಥೆಗಳಿಗೆ ದೇಣಿಗೆ/ಉಚಿತವಾಗಿ ಪಡೆಯಲಾಗಿರುವ ಬಸು, ಆಂಬುಲೆನ್ಸ್‌ಗಳ ಮೇಲೆ ಈ ಸುತ್ತೋಲೆಗೆ ಲಗತ್ತಿಸಿರುವ ಮಾದರಿಯಲ್ಲಿ ಸ್ಟಿಕ್ಕರ್ ಅಳವಡಿಸಲು ಸೂಚಿಸಿದೆ.

25.10.2021
ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು.

ಗೆ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು